**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**
**ಸಿ.ಸಿ ನಂಃ 734/ 2019**

| | | |
|---|---|---|
| ಸಾಕ್ಷಿಯ ಹೆಸರುಃ | ಹಣಮಂತ | ಪ್ರಾಸಾಃ 02 |
| ತಂದೆ/ಗಂಡನ ಹೆಸರುಃ | ಯಂಕಪ್ಪ ಕುಂಟಿ | ಚಾಸಾಃ 05 |
| ವಯಸ್ಸುಃ | 65 ವರ್ಷ | ದಿಃ 06-02-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ದಂತಾಪೂರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾಃ 1, 4, 6 ಮತ್ತು 7 ರವರ ಪರಿಚಯ ಇದೆ. ನನಗೆ ಆರೋಪಿಯ ಪರಿಚಯ ಇದೆ. ದಿಃ 20.4.2019 ರಂದು ನನ್ನ ಸಂಬಂಧಿಕರು ಒಬ್ಬರು ಚಂದ್ರಿಕಿ ಗ್ರಾಮದಲ್ಲಿ ಮರಣ ಹೊಂದಿದ್ದು ಮರಣಕ್ಕೆಂದು ನಾನು ಮತ್ತು ಚಾಸಾ 6 ರವರು ಸದರಿ ದಿನದಂದು ಚಂದ್ರಿಕಿ ಗ್ರಾಮಕ್ಕೆ ಹೋಗಿದ್ದೆವು. ನಂತರ ಸಾಃ 5.30 ಗಂಟೆ ಸಮಯಕ್ಕೆ ನಾವು ಚಾಸಾ ಃ 1 ರವರ ಮನೆಯ ಬಳಿ ಹೋದಾಗ ಆರೋಪಿಯು ಸರಾಯಿ ಕುಡಿದು ಬಂದು ಚಾಸಾ 1 ರವರ ಮನೆಯಲ್ಲಿ ಜಗಳ ಮಾಡುವದು ನಮಗೆ ಕಂಡು ಬಂದಿರುತ್ತದೆ. ನಾವು ಸ್ಥಳಕ್ಕೆ ಹೋದಾಗ ಆರೋಪಿಯು ಚಾಸಾ 1 ರವರನ್ನು ಉದ್ದೇಶಿಸಿ ಬೋಸಡಿ, ರಂಡಿ ಸೂಳೆ ಎಂದು ಬೈಯುತ್ತಾ ಯಾಕೆ ನನ್ನ ಮನೆಗೆ ಬಂದು ನನ್ನ ತಂದೆಯವರಿಗೆ ವಿಷಯವನ್ನು ತಿಳಿಸಿದ್ದಿ ಎಂದು ಅವಾಚ್ಯ ಶಬ್ದದಿಂದ ಚಾಸಾ 1 ರವರಿಗೆ ಬೈದು ಚಾಸಾ 1 ರವರ ಕೂದಲನ್ನು ಹಿಡಿದು ಚಾಸಾ 1 ರವರ ಬೆನ್ನಿಗೆ ಆರೋಪಿಯು ಹೊಡೆದಿರುತ್ತಾನೆ.

ನನ್ನ ತಾಯಿಗೆ ಯಾಕೆ ಹೊಡೆಯುತ್ತಿ ಎಂದು ಚಾಸಾ 4 ರವರು ಆರೋಪಿಯಲ್ಲಿ ಕೇಳಿದಾಗ ಆರೋಪಿಯು ಚಾಸಾ 4 ರವರ ಕಪಾಳಕ್ಕೆ ಹೊಡೆದಿರುತ್ತಾನೆ. ನಂತರ ಆರೋಪಿಯು ಕಟ್ಟಿಗೆಯಿಂದ ಚಾಸಾ 4 ರವರಿಗೆ ಹೊಡೆದಿರುತ್ತಾನೆ.

ನಂತರ ನಾನು, ಚಾಸಾ 4 ಮತ್ತು 6 ರವರು ಜಗಳವನ್ನು ಬಿಡಿಸಿರುತ್ತೇವೆ. ಜಗಳ ಬಿಟ್ಟು ಹೋಗುವಾಗ ಆರೋಪಿಯು ನಾನು ಮತ್ತು ಚಾಸಾ 6 ರವರು ಇದ್ದ ಕಾರಣ ನೀವು ಇಬ್ಬರು ಇವತ್ತು ಉಳಿದಿದ್ದಿರಿ ಇಲ್ಲವಾದರೆ ನಾನೇ ನನ್ನ ಕೈಯಿಂದ ನಿಮ್ಮನ್ನು ಸಾಯಿಸುತ್ತಿದ್ದೆ, ಇವತ್ತಲ್ಲ ನಾಳೆ ನಾನೇ ನಿಮ್ಮನ್ನು ಸಾಯಿಸುತ್ತೇನೆ ಎಂದು ಹೇಳಿ ಆರೋಪಿಯು ಚಾಸಾ 1 ಮತ್ತು ಚಾಸಾ

4 ರವರಿಗೆ ಜೀವದ ಬೆದರಿಕೆಯನ್ನು ಹಾಕಿರುತ್ತಾನೆ. ನಂತರ ಕೃತ್ಯಕ್ಕೆ ಬಳಸಿದ ಕಟ್ಟಿಗೆಯನ್ನು ಆರೋಪಿಯು ಸ್ಥಳದಲ್ಲಿಯೇ ಬಿಟ್ಟು ಹೋಗಿರುತ್ತಾನೆ. ನಾನು ಆರೋಪಿಯ ವಿರುದ್ದ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಮುಮಾ 1 ನ್ನು ನೋಡಿ ಆರೋಪಿಯು ಹಲ್ಲೆ ಮಾಡಲು ಇದೇ ಕಟ್ಟಿಗೆಯನ್ನು ಬಳಸಿರುತ್ತಾನೆ ಎಂದು ಹೇಳಿ ಮುಮಾ 1 ನ್ನು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರಃ ಶ್ರೀ ಎಸ್.ಎಸ್.ಪಿ. ವಕೀಲರವರಿಂದಃ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ.**